ಗಂಟೇಸಾಬರು, ಕುಟ್ರಪ್ಪ, ಪಾಪಾತ್ತಿ, ಪುರ್ರ, ಬುಲೆಟ್‌ಮಾಮು, ವಾಚ್‌ಮನ್ ಪಂಗಾಳಿ, ಡ್ರೈವರ್ ಟೋಬಿ, ಬೇಬಿಸಾಬರು, ಸೆಂಟ್ ಹನ್ಮಂತ, ಉಂತೂರವ್ವ ಒಬ್ಬೊಬ್ಬರೂ ಕಥಾಸರಿತ್ಸಾಗರರೇ! ನಮ್ಮಲ್ಲಿ ಕಾದಂಬರಿಕಾರ ಶ್ರೀಕೃಷ್ಣ ಆಲನಹಳ್ಳಿ ಹೀಗೆ ಮಾತಿಗೆ ತೊಡಗಿದರೆ ಪುಂಖಾನುಪುಂಖ ಕತೆಗಳನ್ನು ಹೇಳಬಲ್ಲವರಾಗಿದ್ದರಂತೆ. ಹಾಗೆಂದೇ ಲಂಕೇಶರಂಥ ಸಂಪಾದಕರು ಆಲನಹಳ್ಳಿಗೆ ಬರೆಯಲಿರುವ ಕಾದಂಬರಿಗೆ ಸಂಭಾವನೆ ಕೊಡುತ್ತಿದ್ದರಂತೆ! ಹೀಗೆ ಅಡ್ವಾನ್ಸ್ ತೆಗೆದುಕೊಂಡು ಬರೆದ ಇನ್ನೊಬ್ಬ ಕನ್ನಡ ಕತೆ—ಕಾದಂಬರಿಕಾರ ಇರಲಿಕ್ಕಿಲ್ಲ. ಸ್ವತಃ ಲಂಕೇಶ್‌ಗೆ ಆ ಶಕ್ತಿ ಇತ್ತು. ಅವರು ಬರೆದ ಕತೆಗಳನ್ನು ಗಮನಿಸಿದರೆ ಅವರು ಕತೆ ಕಟ್ಟುತ್ತಿದ್ದಾರೆಂಬುದು ಗೊತ್ತೇ ಆಗದ ಹಾಗೆ ಕತೆಯೊಂದನ್ನು ಹೇಳಿ ಮುಗಿಸುವ ಶಕ್ತಿ ಹೊಂದಿದ್ದರು ಎನ್ನುವುದು ಅರಿವಾಗುತ್ತದೆ. ಅವರು 'ಎಲ್ಲಿಂದಲೋ ಬಂದವರು' ಸಿನಿಮಾಕ್ಕೆ ಬರೆದ ಹಾಡುಗಳು ಈಗಲೂ ಅಲ್ಲಲ್ಲಿ ಭಾವಗೀತೆಗಳಂತೆ ಹಾಡಿಗೆ ದಕ್ಕುತ್ತಿವೆ. ಅವು ಜನಪದ ಹಾಡುಗಳೋ ಎಂಬಂತೆ ಹಾಡಲ್ಪಡುತ್ತವೆ! ಉಳಿದಂತೆ ತೇಜಸ್ವಿ, ದೇವನೂರ ಮಹದೇವ, ಈಚಿನವರಲ್ಲಿ ಅಬ್ದುಲ್ ರಶೀದ್. ತಡವಾಗಿ (ಕತೆ) ಬರೆಯತೊಡಗಿದ ಶ್ರೀನಿವಾಸ ವೈದ್ಯರು. ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ನಮಗೆ ತಿಳಿದು ಬರುವ ಸಂಗತಿ ಎಂದರೆ ಇವರೆಲ್ಲರೂ ಸಾಮಾನ್ಯ ಜನರೊಂದಿಗಿನ ತಮ್ಮ ಸಹಜ ಸಂಪರ್ಕವನ್ನು ಕಡಿದುಕೊಳ್ಳದೆ, ಅದನ್ನು ಮುಖ್ಯ ಎಂದು ಅರಿತುಕೊಂಡು, ಉಳಿಸಿಕೊಂಡು ಬಂದವರು ಎನ್ನುವುದು. ಹಾಗಾಗಿಯೇ ಇವರ ಭಾಷೆಯಲ್ಲಿ ಆ ತಾಜಾತನ, ಹೊಸತನ ಎಲ್ಲ ಇವೆ. ಆದರೆ ಇದೆಲ್ಲ ಗತಕಾಲಕ್ಕೆ ಸೇರಿಹೋದಂತಿರುವುದು ಸುಳ್ಳಲ್ಲ.

ಇವತ್ತು ಇದಕ್ಕೆ ನಮ್ಮದೇ ಉದಾಹರಣೆ ಕೊಡುವುದಾದರೆ ಅತ್ಯಂತ ಸೂಕ್ತವಾದದ್ದು ಯೋಗರಾಜ್ ಭಟ್ ಅವರ ಸಿನಿಮಾ ಹಾಡುಗಳು! ಯೋಗರಾಜ್ ಭಟ್ಟರ ಹಾಡುಗಳಾದರೂ ತಟ್ಟನೇ ಮಾಸ್ ಅಪೀಲ್ ಪಡೆದುಕೊಂಡು ಜನಪ್ರಿಯವಾಗಲು ಅವು ಜನಸಾಮಾನ್ಯರು ದೈನಂದಿನ ವ್ಯವಹಾರದಲ್ಲಿ ಬಳಸುವ ಭಾಷೆಯಲ್ಲಿರುವುದೂ ಒಂದು ಕಾರಣ. ಇವರ ಪ್ರತಿಭೆಯ ಆಳ ತಿಳಿಯಲು 'ಹುಟ್ಟಿದ ಊರನು ಬಿಟ್ಟು ಬಂದಾ ಮೇಲೆ' ಹಾಡನ್ನು ನೆನಪಿಸಿಕೊಂಡರೆ ಸಾಕು. ಈ ಹಾಡನ್ನು ಕೇಳುತ್ತ ಕಣ್ಣೀರಿಡದವರು ಕಡಿಮೆ. ಇದರೊಂದಿಗೆ ಯೋಗರಾಜ್ ಭಟ್ಟರು ಬಳಸುವ ವಿಟ್ ಮತ್ತು ಪನ್ ಸೇರಿದ್ದೇ 'ಭಯಂಕರ' ಹಿಟ್ ಆಗತೊಡಗಿದ ಅವರ ಹಾಡುಗಳ ಎದುರು ಜಯಂತ ಕಾಯ್ಕಿಣಿಯವರ ಮಾಧುರ್ಯ ಕೂಡ ದೃಢವಾಗಿ ನಿಂತಿದ್ದನ್ನು ಸೂಕ್ಷ್ಮವಾಗಿಯೇ ಗಮನಿಸಬೇಕು. ಜಯಂತರ ಭಾಷೆಯ ನಿಜವಾದ ಉಸಿರು ಇರುವುದು ಅವರ ಸಂವೇದನೆಗಳ ಜೀವಂತಿಕೆ ಮತ್ತು ಪ್ರಾಮಾಣಿಕತೆಯಲ್ಲಿಯೇ. ಜಯಂತ ಬರೆವ ಯುಗಳ ಗೀತೆಗಳಲ್ಲಿ ನನ್ನಂಥವರು ನಮ್ಮನಮ್ಮ ಮೊದಲ ಪ್ರೇಮಗೀತೆಗಳ ಹಿಂದಿದ್ದ ಸಂವೇದನೆಯನ್ನು ಗುರುತಿಸಿಕೊಂಡರೆ, ಈಗಿನ ಕಾಲೇಜು ಯುವಕ ಯುವತಿಯರು ಸರಿಯಾದ ಶಬ್ದ ಕೈಗೆ ಹತ್ತದೇ ತಮ್ಮ ಮನಸ್ಸು ಹೃದಯಗಳ ತುಂಬ ಸಿಕ್ಕಿ ಹಾಕಿಕೊಂಡಂತೆ ಹಿಂಸಿಸುತ್ತಿದ್ದ ಭಾವ ಇದೇ ಅಲ್ಲವೆ ಎಂದು ದಂಗಾಗುತ್ತಾರೆ! ಇಲ್ಲಿಯೇ ನಮಗೆ ಭಾಷೆಯ ಸಹಜ ಗುಣ ಮತ್ತು ಅದನ್ನು ಬಳಸುವವನ ಸಹಜ ಗುಣ ಎರಡೂ ಎಷ್ಟು ಮುಖ್ಯ ಎನ್ನುವುದರ ಹೊಳಹು ಸಿಗಬಹುದು.

ಕನ್ನಡದ ಪರಂಪರೆ ಹಾಗೂ ಕನ್ನಡಿಗರ ಸಹಿಷ್ಣುತೆ ಮುಂತಾದ ಸದ್ಗುಣಗಳನ್ನು ಹೇಳಲು ಉಪಯೋಗಿಸುವ 'ಕನ್ನಡದ ಮನಸ್ಸು' ಎನ್ನುವ ನುಡಿಗಟ್ಟಿನ ಬಗ್ಗೆ ಮಾತನಾಡುತ್ತ ನಾಡಿನ